ಆತ್ಮೀಯಆಧ್ಯಾತ್ಮಬಂಧುಗಳಾದ ರಾಘವೇಂದ್ರಭಜನಾಮಂಡಲಿಯ ಸರ್ವಸಭ್ಯರಿಗೆ ಅನಂತಪ್ರಣಾಮಗಳು. ಸಮಾಜದ ಎಲ್ಲಾ ವರ್ಗದ ಸಾತ್ವಿಕಜನಾಂಗದ ಸಂಕ್ಷೇಮಕ್ಕಾಗಿಯೋ ಎನ್ನುವಂತೆ, ತ್ರಿಮತಾಚಾರ್ಯರಲ್ಲಿ ಒಬ್ಬರಾದ, ಸಾಕ್ಷಾತ್‌ವಾಯುದೇವರ ಅವತಾರಿಗಳಾದ, ಆಚಾರ್ಯಮಧ್ವರ ವಿಗ್ರಹದ ಪ್ರತಿಷ್ಠಾಪನಾಮಹೋತ್ಸವವು, 2017 ಮೇ ತಿಂಗಳ 7, 8, 9, 10ನೇ ದಿನಾಂಕಗಳಲ್ಲಿ, ಉಡುಪೀಕ್ಷೇತ್ರಕ್ಕೆ ಹತ್ತಿರದಲ್ಲಿರುವ, ಕುಂಜಾರಗಿರಿ (ದುರ್ಗಾಬೆಟ್ಟದ)ಯ ತಪ್ಪಲಲ್ಲಿ ನಡೆಯಲಿದೆ. ಈ ಕುಂಜಾರಗಿರಿಯು ಉಡುಪಿಯಿಂದ ಪಾಜಕಕ್ಷೇತ್ರಕ್ಕೆ ಹೋಗುವ ಹಾದಿಯಲ್ಲಿ ಬರುತ್ತದೆ. ದುರ್ಗಾಬೆಟ್ಟದ ಎದುರಿನಲ್ಲೆ ಪರಶುರಾಮಬೆಟ್ಟವಿದೆ. ಪರಶುರಾಮಬೆಟ್ಟದ ಕೆಳಗಿನ ಬೈಲಲ್ಲಿ ಪೂರ್ವಾಭಿಮುಖವಾಗಿ ಸುವಿಶಾಲವಾದ ವೇದಿಕೆ ಇರುತ್ತದೆ. ಮುಂದುಗಡೆಯಲ್ಲಿ ದುರ್ಗಾಬೆಟ್ಟದ ಕೆಳಭಾಗದಲ್ಲಿ ಪಶ್ಚಿಮಾಭಿಮುಖವಾಗಿ, 32ಅಡಿಎತ್ತರದ ಆಚಾರ್ಯಮಧ್ವರ ವಿಗ್ರಹವು 40ಅಡಿಎತ್ತರದ ಪೀಠದಮೇಲೆ ಇರುತ್ತದೆ.

**ವಸತಿವ್ಯವಸ್ಥೆ :–** ದುರ್ಗಾಬೆಟ್ಟದಿಂದ ಮುಂದೆ 2ಕಿಲೋಮೀಟರ್ ದೂರದಲ್ಲಿ ಪಾಜಕಕ್ಷೇತ್ರವಿದೆ. ದುರ್ಗಾಬೆಟ್ಟ ಮತ್ತು ಪಾಜಕಕ್ಷೇತ್ರಗಳ ಮಧ್ಯದಲ್ಲಿ, ಪೆಜಾವರಶ್ರೀಗಳವರಿಂದ ನಿರ್ಮಿಸಲ್ಪಟ್ಟ ಕಾಲೇಜಿನಲ್ಲಿ, ಭಜನಾಮಂಡಲಿಗಳಿಗೆ ವಸತಿಯ ಸೌಕರ್ಯವಿರುತ್ತದೆ. ಕಾಲೇಜು ಮತ್ತು ಹಾಷ್ಟಲುಗಳಿಗೆ ಸೇರಿದಂತೆ 50ರೂಮುಗಳು, ಮೂರುಹಾಲುಗಳು ಇರುತ್ತವೆ. ಎಲ್ಲಾರೂಮುಗಳು ವಿಶಾಲವಾದವುಗಳು. ಒಂದೊಂದುರೂಮಿನಲ್ಲಿ ಎರಡುಭಜನಾಮಂಡಲಿಗಳು ಇರಬಹುದು. ಹಾಲುಗಳಲ್ಲಿ ಕನಿಷ್ಠ 4ಭಜನಾಮಂಡಲಿಗಳು ಇರಬಹುದು. ಭಜನಾಮಂಡಲಿಗಳಿಗೆ ಇಲ್ಲಿ ಯಥಾಶಕ್ತಿ ವಸತಿಸೌಕರ್ಯ ಮಾಡಲಾಗುವುದು. ಒಂದುಭಜನಾಮಂಡಲಿಗೆ ಒಂದುರೂಮಿನವ್ಯವಸ್ಥೆ ಇಲ್ಲ. ಎಲ್ಲರು ಸಹಕರಿಸಿ ಯತಿಗಳ+ಆಚಾರ್ಯಮಧ್ವರ ಪರಮಾನುಗ್ರಹಕ್ಕೆ ಪಾತ್ರರಾಗಬೇಕು. ಒಂದು ಭಜನಾಮಂಡಲಿಯಿಂದ 15ಜನಕ್ಕೆ ಕಮ್ಮಿಯಾಗದಂತೆ 20ಜನಕ್ಕೆ ಹೆಚ್ಚದಂತೆ ಸಭ್ಯರು ಬರಬೇಕು. ಇದರಮೇಲೆ ಹೆಚ್ಚಿನಸಂಖೆಯಲ್ಲಿ ಸಭ್ಯರು ಬಂದಲ್ಲಿ ಅವರಿಗೆ ವಸತಿಸೌಕರ್ಯವಿರುವುದಿಲ್ಲ. ಇದನ್ನು ಗಮನದಲ್ಲಿಡಿರಿ.

**ಉಪಹಾರ–ಊಟದವ್ಯವಸ್ಥೆ :–** ಪ್ರತಿನಿತ್ಯ ಮುಂಜಾನೆ 5:00 ರಿಂದ 5:45ರ ಒಳಗಾಗಿ, ಭಜನಾಮಂಡಲಿಯ ಸರ್ವಸಭ್ಯರನ್ನು ಇಳಿದುಕೊಂಡಸ್ಥಳದಿಂದ, ಬಸ್ಸುಗಳಲ್ಲಿ ವೇದಿಕೆ ಇರುವ ಸ್ಥಳಕ್ಕೆ ಕರೆದುಕೊಂಡುಬರಲಾಗುವುದು. ವೇದಿಕೆಯ ಹಿಂಬದಿಯಲ್ಲೆ ಇರುವ ವಿಶಾಲಪ್ರಾಂಗಣದಲ್ಲಿ ಕಾಫಿ/ಟೀ/ಹಾಲುಗಳ ವ್ಯವಸ್ಥೆ ಇರುತ್ತದೆ. 8ಗಂಟೆಗೆ ಸರಿಯಾಗಿ ಉಪಹಾರ ನೀಡಲಾಗುವುದು. ನಾವು ಸೇರುವ ಸ್ಥಳ ದಿವ್ಯಕ್ಷೇತ್ರ; ಇಂಥಾ ಪವಿತ್ರಸ್ಥಳದಲ್ಲಿ ಅಶುಚಿಗೆ, ಮೈಲಿಗೆಗೆ ಅವಕಾಶವೇ ಇರುವುದಿಲ್ಲ. ನಾವೆಲ್ಲರೂ ನಿಜವಾದದಾಸರಾಗಿ ಬಾಳೋಣ. ನಮ್ಮಿಂದ ಕಾರ್ಯಕರ್ತರಿಗೆ ಶ್ರಮವಾಗಬಾರದು. ಒಳಗೊಂದು ಹೊರಗೊಂದು ಬೇಡ. ಮಧ್ಯಾಹ್ನದ ಹಾಗು ರಾತ್ರಿಯ ಊಟವನ್ನು ಬಫೆಸಿಸ್ಟಮ್‌ನಲ್ಲಿ ಕೊಡುತ್ತಾರೆ. ಸರ್ವರೂ ಸಹಕರಿಸಬೇಕಾಗಿ ಪ್ರಾರ್ಥನೆ. ನಿಮ್ಮ ಭಜನಾಮಂಡಲಿಯಲ್ಲಿ ಬಹಳ ಮಡಿಮಾಡುವವರಿದ್ದರೆ, ಪತ್ರದದ್ವಾರಾ ಎಷ್ಟುಜನರೆಂಬುದನ್ನು ತಿಳಿಸಬೇಕು. ಏನಿದ್ದರೂ ಇಬ್ಬರು ಅಥವಾ ಮೂರುಜನರಿಗಿಂಥ ಹೆಚ್ಚಾಗಬಾರದು.

**ನಿಯಮಾವಳಿ :–** ಭಜನಾಮಂಡಲಿಯ ಸಭ್ಯರು ಶಿಸ್ತನ್ನು ಪಾಲಿಸಬೇಕು. ಭಜನಾಮಂಡಲಿಯ ಆಧ್ಯಕ್ಷರು ಇದರಬಗ್ಗೆ ಹೆಚ್ಚು ಕಾಳಜಿವಹಿಸಬೇಕು. ಕಾಫಿ+ಉಪಹಾರ+ಊಟ ಎಲ್ಲದರಲ್ಲೂ ಶಿಸ್ತನ್ನು ಅನುಸರಿಸಿ, ಗುರುಗಳ ಅನುಗ್ರಹಕ್ಕೆ ಪಾತ್ರರಾಗಬೇಕು. ವೇದಿಕೆಯ ಮುಂದೆ ಶಿಸ್ತಾದರೀತಿಯಲ್ಲಿ ಒಂದುಕ್ರಮದಲ್ಲಿ ಕುಳಿತು, ಎಲ್ಲ ಶ್ರೀಗಳವರಿಗೆ ಆನಂದವನ್ನುಂಟುಮಾಡಬೇಕು. ನಮ್ಮ ಭಜನಾಮಂಡಲಿಗಳ ಸಭ್ಯರು ಎಲ್ಲರಿಗೂ ಆದರ್ಶಪ್ರಾಯರಾಗಬೇಕು. ನೀವು ಶ್ರೀನಿವಾಸನ ಹಾಗು ರಾಘವೇಂದ್ರರ ಮುದ್ದಿನಮಕ್ಕಳೆಂಬುದನ್ನು ಮರೆಯಬಾರದು.

**ತರಬೇಕಾದ ವಸ್ತುಗಳು :–** 1. ಧ್ವಜ; ಇದರ ಡಿಜೈನನ್ನು ಇದರೊಟ್ಟಿಗೆ ಇಡಲಾಗಿದೆ. ಈ ಧ್ವಜವನ್ನು ಇನ್ನು ಮುಂದೆ ಪ್ರಾಜೆಕ್ಟಿನ ಯಾವಕಾರ್ಯಕ್ರಮಗಳಲ್ಲಿ ಭಾಗವಹಿಸಿದರೂ ತರಬೇಕು. 2.ತಾಳ ಅಥವಾ ಚಿಟಿಗೆ. 3.ಆರತಿಮಾಡಲು ಅನುಕೂಲವಾಗುವಂತೆ, ಬ್ಯಾಟರಿಯಿಂದ ಮಾಡಲ್ಪಟ್ಟ ಒಂದುಪ್ರಣತಿಯನ್ನು ತರಬೇಕು. ಬ್ಯಾಟರೀ ಆನ್‌ಮಾಡಿದಕೂಡಲೇ ಲೈಟು ಉರಿಯುತ್ತದೆ. ಇದನ್ನು ಕೈಯಲ್ಲಿ ಹಿಡಿದು 10ನೇ ತಾರೀಕಿನಂದು, ನಾವು ಹೇಳಿದಂತೆ ಕಮಲಾಕಾರದಲ್ಲಿ ನಿಂತು, ಮಧ್ವಾಚಾರ್ಯರಿಗೆ ಸಾಮೂಹಿಕವಾಗಿ ಹಾಡು ಹೇಳುತ್ತಾ ಆರತಿಮಾಡಬೇಕು. ಇದಕ್ಕಾಗಿ ಶ್ರಮವಾದರೂ ದಯಮಾಡಿ ಬ್ಯಾಟರಿಯ ಪ್ರಣತಿಯನ್ನು, ಧ್ವಜವನ್ನು ತೆಗೆದುಕೊಂಡು ಬರಬೇಕಾಗಿ ಪ್ರಾರ್ಥನೆ. 4. ಕೋಲು ಹಾಕಲು ಉಪಯೋಗವಾಗುವಂತೆ ಎರಡುಕೋಲುಗಳನ್ನು ನಿಮ್ಮೊಟ್ಟಿಗೆ ಕಡ್ಡಾಯವಾಗಿ ತರಬೇಕು.

**ಹಾಡುಗಳ ಅಭ್ಯಾಸ :–** ಈ ಕಾರ್ಯಕ್ರಮಕ್ಕಾಗಿ ಗುರುಸಾರ್ವಭೌಮದಾಸಸಾಹಿತ್ಯಪ್ರಾಜೆಕ್ಟಿನವತಿಯಿಂದ 56ಹಾಡುಗಳನ್ನು ಆರಿಸಿ, ಅವುಗಳಿಗೆ ಸಂಪ್ರದಾಯಬದ್ಧವಾದ ರಾಗಗಳನ್ನು ಜೋಡಿಸಿ, ಮಂತ್ರಾಲಯಮಠದ ವೆಬ್‌ಸೈಟ್‌ನಲ್ಲಿ (www.srsmutt.org) ಹಾಡುಗಳನ್ನು, ಅದರ ಹಾಡುವ ಪದ್ಧತಿಯನ್ನು ಕಳಿಸಲಾಗಿದೆ. ನೀವು ಈ ವೆಬ್‌ಸೈಟಿನ ಅಡ್ರಸ್ಸನ್ನು ಟೈಪ್‌ಮಾಡಿದರೆ, ಮಠದ ವೆಬ್‌ಸೈಟ್ ತೆರೆದುಕೊಳ್ಳುತ್ತದೆ. ಅದರಲ್ಲಿ ದಾಸಸಾಹಿತ್ಯಪ್ರಾಜೆಕ್ಟಿನ ಗುರುತಿನಮೇಲೆ ಒತ್ತಿದರೆ, 56ಹಾಡುಗಳು ಮತ್ತು ಅವುಗಳ ಆಡಿಯೋ ಕೇಳಿಬರುತ್ತದೆ. ಭಜನಾಮಂಡಲಿಯ ಪ್ರತಿಸಭ್ಯರೂ ಹಾಡುಗಳನ್ನು ಕಂಠಸ್ಥಮಾಡಿ, ಆಡಿಯೋದಲ್ಲಿರುವಂತೆ ತಾಳಬದ್ಧವಾಗಿ ಒಂದೇಶೃತಿಯಲ್ಲಿ ಹಾಡಲು ಅಭ್ಯಾಸಮಾಡಬೇಕು. ಭಜನಾಮಂಡಲಿಯ ಸಭ್ಯರು ಹಾಡುಗಳನ್ನು ಕಲಿಯದೇ ಬಂದಲ್ಲಿ, ಆ ಭಜನಾಮಂಡಲಿಯನ್ನು ಪ್ರಾಜೆಕ್ಟಿನಿಂದ ದೂರಸರಿಸಲಾಗುವುದು. ಇದರಲ್ಲಿ ಯಾವ ವ್ಯತ್ಯಾಸವು ಇರುವುದಿಲ್ಲ. ಹಾಡುಗಳನ್ನು ಹಾಗು ಅವುಗಳನ್ನು ಹಾಡುವ ಪದ್ಧತಿಗೆ ಸಂಬಂಧಿಸಿದ ಆಡೊಯೋವನ್ನು, ವಾಟ್ಸಪ್‌ದ್ವಾರಾ ಕೂಡ ಕಳಿಸಲಾಗುವುದು. ದಯಮಾಡಿ ಅಭ್ಯಾಸಮಾಡಿ. ಜೀವನ ಧನ್ಯಮಾಡಿಕೊಳ್ಳಿರಿ. ಭಜನಾಮಂಡಲಿಯ ಸಭ್ಯರೆಲ್ಲರೂ ಹಾಡುಗಳನ್ನು ಒಂದೇರಾಗದಲ್ಲಿ, ಒಂದೇಶೃತಿಯಲ್ಲಿ, ಒಂದೇತಾಳದಲ್ಲಿ ಹಾಡುವಂತಾಗಬೇಕು. ಇದೇ ನಮ್ಮ ಶ್ರೀಶ್ರೀಸುಬುಧೇಂದ್ರತೀರ್ಥರ ಅಪೇಕ್ಷೆ.

**ಸಾಂಸ್ಕೃತಿಕಕಾರ್ಯಕ್ರಮಗಳು :–** ಭಜನಾಂಡಲಿಗಳ ಸಭ್ಯರು ಸುಂದರವಾದ ರೀತಿಯಲ್ಲಿ ಯಾವುದಾದರೂ ಒಂದುರೂಪಕವನ್ನು ಪ್ರದರ್ಶಿಸಲು ಅಪೇಕ್ಷಿಸಿದಲ್ಲಿ, ಅವರು ಆ ರೂಪದಕದ ವಿಷಯವನ್ನು ಪತ್ರದ್ವಾರಾ ಪ್ರಾಜೆಕ್ಟಿಗೆ ತಿಳಿಸಬೇಕು. ರೂಪಕ ಪ್ರದರ್ಶನಕ್ಕೆ ಕೇವಲ 10ನಿಮಿಷಗಳ ಸಮಯಮಾತ್ರವಿರುತ್ತದೆ.

"ಡೀಡೀ ಆಡ್ಯಾನೆ ರಂಗ ಡೀಡಿ ಆಡ್ಯಾನೆ" ಮುಂತಾದ ಒಂದುಹಾಡಿಗೆ ಕೋಲುಹಾಕಲು ಅಥವಾ ನೃತ್ಯಪ್ರದರ್ಶನ ಮಾಡಲು ಅಪೇಕ್ಷಿಸಿದಲ್ಲಿ, ಅದನ್ನು ಸಹ ತಿಳಿಸಬೇಕು. ಕೋಲು ಮತ್ತು ನೃತ್ಯಪ್ರದರ್ಶನಗಳಿಗೆ ಕೇವಲ 5ನಿಮಿಷಗಳ ಕಾಲಾವಕಾಶವಿರುತ್ತದೆ. ನೃತ್ಯ ಮತ್ತು ಕೋಲಾಟಗಳನ್ನು ಪ್ರದರ್ಶಿಸಲು ಅಪೇಕ್ಷಿಸುವ ಭಜನಾಮಂಡಲಿಗಳು ವಯಸ್ಸನ್ನು ಪ್ರಧಾನವಾಗಿ ಗಮನದಲ್ಲಿಡಬೇಕು. ಮಕ್ಕಳಿಗೆ, ಯುವತಿಯುವಕರಿಗೆ ಪ್ರಾಧಾನ್ಯತೆಯನ್ನು ಕೊಡಿರಿ. ಸಾಂಸ್ಕೃತಿಕಕಾರ್ಯಕ್ರಮಗಳನ್ನು ನೀಡಲು ಮೊಟ್ಟಮೊದಲು ತಿಳಿಸಿದ ಭಜನಾಮಂಡಲಿಗಳಿಗೆ, ಮೊದಲ ಅವಕಾಶ ನೀಡಲಾಗುವುದು. ಕಾಲಾವಕಾಶ ದೊರೆಯದೇ ಇದ್ದಲ್ಲಿ ಕೊನೆಗೆ ಬಂದ ಅಪ್ಲಿಕೇಷನ್‌ಗಳನ್ನು ರದ್ದುಗೊಳಿಸಲಾಗುವುದು.

## – : ಪ್ರತಿನಿತ್ಯದ ಕಾರ್ಯಕ್ರಮಗಳು : –

### 07–05–2017 ರವಿವಾರ – ದ್ವಾದಶಿ

**ಸಂಜೆ :** 05:00 ರಿಂದ 06:30 – ಪಾಜಕದಿಂದ ದುರ್ಗಾಬೆಟ್ಟದವರಿಗೆ ಭಜನೆಮಾಡುತ್ತಾ ಶೋಭಾಯಾತ್ರೆ.

ಶ್ರೀಶ್ರೀಸುಬುಧೇಂದ್ರತೀರ್ಥರು ಶ್ರೀರಾಘವೇಂದ್ರಸ್ವಾಮಿಮಠ, ಶ್ರೀವಿದ್ಯಾದೀಶತೀರ್ಥರು ಇವರೇ ಮೊದಲಾದ 20ಜನ ಯತಿಗಳು ಶೋಭಾಯಾತ್ರೆಯಲ್ಲಿ ಭಾಗವಹಿಸುವರು.

06:30 ರಿಂದ 07:00 – ಧ್ವಜಾರೋಹಣೆ, ಧ್ವಜಗೀತಾಲಾಪನೆ, ಧ್ಯಾನ, ಸಾಮೂಹಿಕಗೋಷ್ಠಿಗಾನ

07:00 ರಿಂದ 08:30 – ಯತಿಗಳಿಂದ ಸಂದೇಶ

## 08-05-2017 ಸೋಮವಾರ – ತ್ರಯೋದಶಿ

**ಉದಯ:** 06:00 ರಿಂದ 07:30 – ಸುಪ್ರಭಾತ, ಧ್ಯಾನ, ಸಾಮೂಹಿಕಭಜನೆ.

09:00 ರಿಂದ 11:00 – ಆಚಾರ್ಯಮಧ್ವರ ವಿಗ್ರಹಪ್ರತಿಷ್ಠಾಪನೆ.
ಪಂಚವಾದ್ಯಗಳ ಘೋಷ, ವೇದಘೋಷ, ಸಾಮೂಹಿಕನಾಮಜಪ, ಗೋಷ್ಠಿಗಾನ, ಚಂಡೀವಾದ್ಯ.

11:00 ರಿಂದ 12:00 – ಭಜನಾಮಂಡಲಿಗಳಿಂದ ಸಾಂಸ್ಕೃತಿಕಕಾರ್ಯಕ್ರಮಗಳು.

**ಸಂಜೆ :** 03:00 ರಿಂದ 04:00 – ವಾಹನಗಳಲ್ಲಿ ಉಡುಪಿಗೆ ಪ್ರಯಾಣ.

04:00 ರಿಂದ 06:00 – ರಥಬೀದಿಗಳಲ್ಲಿ ಭಜನೆಮಾಡುತ್ತಾ ನಗರಸಂಕೀರ್ತನೆ. ಶ್ರೀಕೃಷ್ಣದರ್ಶನ.

06:00 ರಿಂದ 07:30 – ರಾಜಾಂಗಣದಲ್ಲಿ ಭಜನಾಮಂಡಲಿಗಳಿಂದ ಸಾಮೂಹಿಕಗೋಷ್ಠಿಗಾನ.

ಶ್ರೀಗಳವರಿಂದ ಅನುಗ್ರಹಸಂದೇಶ.

07:30 ರಿಂದ 08:30 – ಭೋಜನಶಾಲೆಯಲ್ಲಿ ಶ್ರೀಕೃಷ್ಣನ ಪ್ರಸಾದದ ಸ್ವೀಕಾರ.

08:30 ರಿಂದ 09:30 – ವಾಹನಗಳಲ್ಲಿ ಮರಳಿ ಪಾಜಕಕ್ಕೆ ತಿರುಗುಪ್ರಯಾಣ.

## 09-05-2017 ಮಂಗಳವಾರ – ಚತುರ್ದಶಿ – ನರಸಿಂಹಜಯಂತಿ

**ಉದಯ:** 06:00 ರಿಂದ 07:30 – ಸುಪ್ರಭಾತ, ಧ್ಯಾನ, ಸಾಮೂಹಿಕಭಜನೆ.

08:30 ರಿಂದ 10:00 – ಪ್ರಹ್ಲಾದಚರಿತ್ರೆಯ ಸಾಮೂಹಿಕಪಾರಾಯಣ.
(ಗುರುಜಗನ್ನಾಥದಾಸರು ರಚಿಸಿದ ಕೋಲುದಾಟಿಯ ಪ್ರಹ್ಲಾದಚರಿತ್ರೆ)
ಭಜನಾಮಂಡಲಿಗಳಿಂದ ಸಾಮೂಹಿಕ ಗೋಷ್ಠಿಗಾನ.

10:00 ರಿಂದ 12:00 – ವಿದ್ವಾಂಸರಿಂದ ಉಪನ್ಯಾಸಗಳು. ಶ್ರೀಗಳವರಿಂದ ಅನುಗ್ರಹಸಂದೇಶ.

**ಸಂಜೆ :** 03:00 ರಿಂದ 05:00 – ಭಜನಾಮಂಡಲಿಗಳಿಂದ ಸಾಂಸ್ಕೃತಿಕಕಾರ್ಯಕ್ರಮಗಳು.

06:00 ರಿಂದ 07:30 – ಶ್ರೀಗಳವರ ಅನುಗ್ರಹಸಂದೇಶ.

07:30 ರಿಂದ 08:30 – ಆಚಾರ್ಯಮಧ್ವರ ಜೀವನಚರಿತ್ರೆಯ ವೀಡಿಯೋ ಕಾರ್ಯಕ್ರಮ.

## 10-05-2017 – ಬುಧವಾರ – ಹುಣ್ಣಿಮೆ

**ಉದಯ:** 06:00 ರಿಂದ 07:30 – ಸುಪ್ರಭಾತ, ಧ್ಯಾನ, ಸಾಮೂಹಿಕಭಜನೆ.

09:00 ರಿಂದ 11:00 – ಆಚಾರ್ಯಮಧ್ವರಿಗೆ ವಿಶೇಷಪಂಚಾಮೃತಾಭಿಷೇಕ.
ಈ ಸಂದರ್ಭದಲ್ಲಿ ಭಜನಾಮಂಡಲಿಗಳಿಂದ ಸಾಮೂಹಿಕಗೋಷ್ಠಿಗಾನ.


ಶ್ರೀಗಳವರಿಂದ ಅನುಗ್ರಹಸಂದೇಶ.

**ಸಂಜೆ :** 03:00 ರಿಂದ 05:00 – ಭಜನಾಮಂಡಲಿಗಳಿಂದ ಸಾಂಸ್ಕೃತಿಕಕಾರ್ಯಕ್ರಮಗಳು.

**ರಾತ್ರಿ :** 06:00 ರಿಂದ 07:00 – ಆಚಾರ್ಯಮಧ್ವರಿಗೆ ಯತಿಶ್ರೇಷ್ಠರಿಂದಲೂ, ಭಜನಾಮಂಡಲಿಗಳ ಸಭ್ಯರಿಂದಲೂ ಮಂಗಳದ ಹಾಡಿನೊಟ್ಟಿಗೆ ಮಹಾನೀರಾಜನ.

ಈ ನೀರಾಜನದ ಕಾರ್ಯಕ್ರಮ, ಹೃದಯದಲ್ಲಿರುವ ಅಷ್ಟದಳಗಳಕಮಲದ ಆಕಾರದಲ್ಲಿ ಭಜನಾಮಂಡಲಿಯ ಸಭ್ಯರೆಲ್ಲರೂ ನಿಂತು ಮಾಡಿದಂತೆ ಇರುತ್ತದೆ. ಇದಕ್ಕೆ ತಕ್ಕಂತೆ ಕಾರ್ಯಕರ್ತರ ಸೂಚನೆಗಳಿಗೆ ಅನುಗುಣವಾಗಿ ಭಜನಾಮಂಡಲಿಯ ಸಭ್ಯರೆಲ್ಲರೂ ನಿಂತು ಸಹಕರಿಸಬೇಕು.

ಕಮಲದ ಆಕಾರ ಮತ್ತು ಕಮಲದ ಸುತ್ತಲು ಇರುವ ಗೆರೆಗಳ ಮಾದರಿಯ ಚಿತ್ರ




ಈ ಮಹಾಯಜ್ಞದಲ್ಲಿ ಭಾಗವಹಿಸಿ, ಜನ್ಮಧನ್ಯಮಾಡಿಕೊಳ್ಳಿ. ದೊರೆಯಲಾರದ ಸೌಭಾಗ್ಯ ದೊರೆತಿದೆ. ಶಿಸ್ತು, ಭಕ್ತಿಗಳು ನಮ್ಮ ಉಸಿರಾಗಬೇಕು. ಕೀರ್ತಿಕಾಂಕ್ಷೆ ಬೇಡ. ನಿಜವಾದ ದಾಸರಾಗೋಣ. ಭಗವತ್ಪ್ರೀತಿಯೇ ನಮಗೆ ನಿಜವಾದ ಪ್ರಸಾದ.

॥–ಹರೇಶ್ರೀನಿವಾಸ–॥ ॥–ಗುರೋರಾಘವೇಂದ್ರ–॥

ಅನಂತಪ್ರಣಾಮಗಳು

**ಕೆ.ಅಪ್ಪಣ್ಣಾಚಾರ್ಯ**
ನಿರ್ದೇಶಕ, ಗುರುಸಾರ್ವಭೌಮದಾಸಾಹಿತ್ಯಪ್ರಾಜೆಕ್ಟ್,
ಶ್ರೀರಾಘವೇಂದ್ರಸ್ವಾಮಿಮಠ, ಮಂತ್ರಾಲಯ.